
## ಕಥೋಪದೇಶ




ಏಕನಾಥರು ಸಂತಶ್ರೇಷ್ಠರಲ್ಲಿ ಒಬ್ಬರು. ಇವರು ಜಾತಿ ಭೇದವಿಲ್ಲದೆ ಎಲ್ಲರನ್ನೂ ಸಮಾನಭಾವದಿಂದ.ನೋಡುತ್ತಿದ್ದರು. ಒಂದು ಸಾರಿ ಒಬ್ಬಳು ಕೀಳುಜಾತಿಯ ಹೆಂಗಸು ಬಂದು ಬಹಳ ಭಕ್ತಿಭಾವದಿಂದ ಏಕನಾಥರಿಗೆ ಹೇಳಿದಳು: “ನಾನು ಕೇಳಿದ್ದೇನೆ, ನಿಮ್ಮ ಮನೆಯಲ್ಲಿ ಭಗವಂತ ಬಂದು ನೀರು ತುಂಬುವನು ಎಂದು. ಆದರೆ ನನಗೆ ಮಾತ್ರ ಕಾಣಿಸುವುದಿಲ್ಲ. ಏನಾದರೂ ಅವನಿಗೆ (ಭಗವಂತನಿಗೆ) ಕೊಡುವುದಾದರೂ ಹೇಗೆ? ನಾನೇನು ನಿಮ್ಮ ಹಾಗೆ ಸಂತಳಲ್ಲ. ನಾನು ಮಾತ್ರ ನಿಮ್ಮನ್ನೇ ಭಗವಂತನೆಂದು ಭಾವಿಸುತ್ತೇನೆ. ನೀವು ನನ್ನ ಬಡಗುಡಿಸಿಲಿಗೆ ಬಂದು ನನ್ನಲ್ಲಿರುವ ಒಣಗಿದ ರೊಟ್ಟಿ ಮತ್ತು ಚಟ್ನಿಯನ್ನು ಸ್ವೀಕರಿಸಿದರೆ, ನನಗೆ ಬಹಳ ಸಂತೋಷವಾಗುವುದು.” ಸಂತ ಏಕನಾಥರು ಬಹಳ ಸಂತೋಷದಿಂದ ಒಪ್ಪಿಕೊಂಡು ಅವಳ ಬಡಗುಡಿಸಿಲಿಗೆ ಹೋಗಿ ಬಹಳ ಆನಂದದಿಂದ ಊಟ ಮಾಡಿದರು. ಏಕನಾಥರು ಕೀಳುಜಾತಿಯವಳ ಮನೆಯಲ್ಲಿ ಊಟ ಮಾಡಿದ ಸುದ್ದಿ ಊರಿನಲ್ಲೆಲ್ಲಾ ಹರಡಿತು. ಇದನ್ನು ಸಂಪ್ರದಾಯವಾದಿಗಳು ಸಹಿಸಲಿಲ್ಲ. ಅವರು ಕೋಪಗೊಂಡರು. ಏಕನಾಥರನ್ನು ತಮ್ಮ ಪಂಗಡದಿಂದ ಬಹಿಷ್ಕಾರ ಮಾಡಬೇಕೆಂದು ತೀರ್ಮಾನಿಸಿದರು. ಆದರೆ ಇದರಿಂದ ಏಕನಾಥರ ಮೇಲೆ ಯಾವುದೇ ರೀತಿಯ ಪರಿಣಾಮ ಉಂಟಾಗಲಿಲ್ಲ.

ಕೆಲವು ದಿನಗಳು ಕಳೆದ ಅನಂತರ ಪಿತೃಪಕ್ಷ ಬಂತು. ಏಕನಾಥರು ಪ್ರತಿವರ್ಷದಂತೆ ಬ್ರಾಹ್ಮಣರನ್ನು ಆಹ್ವಾನ ಮಾಡಿದರು. ಆದರೆ ಆ ಬ್ರಾಹ್ಮಣರು ಈ ಜಾತಿಭ್ರಷ್ಟನ ಮನೆಗೆ ಹೇಗೆ ತಾನೆ ಬಂದಾರು? ಇವರ ಮನೆಗೆ ಬರಲು ನಿರಾಕರಿಸಿದರು. ಇದರಿಂದಲೂ ಸಹ ಏಕನಾಥರು ಸ್ವಲ್ಪವೂ ಕೂಡ ವಿಚಲಿತರಾಗಲಿಲ್ಲ. ಅವರು ಪೂರ್ವಜರ ಪಿತೃಗಳನ್ನು ಆಹ್ವಾನ ಮಾಡಿದರು. ಪೈಠಣ ಹಳ್ಳಿಯ ಎಲ್ಲ ಬ್ರಾಹ್ಮಣರ ಮೃತರಾದ ತಂದೆ, ಅಜ್ಜ, ಮುತ್ತಜ್ಜ, ಊಟಮಾಡಲು ಬಂದರು. ಈ ಸುದ್ದಿ ಬ್ರಾಹ್ಮಣರಿಗೆ ಗೊತ್ತಾದಾಗ ಅವರಿಗೆಲ್ಲ ಬಹಳ ನಾಚಿಕೆಯಾಯಿತು. ಎಲ್ಲರೂ ಬಂದು ಸಂತ ಏಕನಾಥರ ಹತ್ತಿರ ಕ್ಷಮೆ ಬೇಡಿ ಮೊದಲಿನಂತೆ ವ್ಯವಹರಿಸಲು ಪ್ರಾರಂಭಿಸಿದರು.

**ಮಹಾತ್ಮರಿಗೆ, ಸಾಧುಸಂತರಿಗೆ ಯಾವುದೇ ರೀತಿಯ ಜಾತಿ-ಭೇದಗಳೆಂಬ ಭಾವನೆ ಇರುವುದಿಲ್ಲ. ಎಲ್ಲರನ್ನೂ ಸಮತ್ವ ಭಾವದಿಂದ ಕಾಣುತ್ತಾರೆ. ಅವರನ್ನು ನಮ್ಮ ಅಲ್ಪ ಬುದ್ಧಿಯಿಂದ ಅಳೆಯಲು ಹೋಗಬಾರದೆಂಬುದು ಇದರ ಸಾರಾಂಶವಾಗಿದೆ.**